# ನುಡಿಗಟ್ಟಿಲ್ಲ, ನೇಟಿವಿಲ್ಲ ಇಲ್ಲ

**-ಮನು ಚಕ್ರವರ್ತಿ,**
ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾ ವಿಮರ್ಶಕ

ಇತ್ತೀಚಿನ ವರ್ಷಗಳ ಕೆಲವು ಸಿನಿಮಾಗಳನ್ನು ನೋಡಿದಾಗ, ಕನ್ನಡ ಚಿತ್ರರಂಗ ಬೇರೆ ದಾರಿಯಲ್ಲಿ ಹೋಗಲಿಕ್ಕೆ ಶುರುವಾಗಿದೆ ಅನ್ನಿಸುತ್ತೆ. ಆದರೆ, ಇತ್ತೀಚಿನ ಮರಾಠಿ–ಬೆಂಗಾಲಿ ಸಿನಿಮಾಗಳನ್ನು ನೋಡಿದರೆ, ಅವರ ತಾತ್ವಿಕತೆ, ಸೈದ್ಧಾಂತಿಕತೆ ಹಾಗೂ ಸಿನಿಮಾದ ಈಸ್ತೆಟಿಕ್ಸ್‌ಗೆ ಹೋಲಿಸಿ ನೋಡಿದರೆ ನಮ್ಮಲ್ಲಿ ಅಂಥ ಗಟ್ಟಿ ಪ್ರಯತ್ನಗಳೇನೂ ನಡೆದಿಲ್ಲ ಅನ್ನಿಸುತ್ತದೆ.

ಕನ್ನಡದ ಕೆಲವು ಸಿನಿಮಾಗಳನ್ನು ರೂಪಿಸಿರುವ ರೀತಿ ಬೇರೆಯಾಗಿದೆ, ಆಶಯ ಹೊಸದಾಗಿದೆ ಅನ್ನುವುದು ನಿಜ. ಆದರೆ, ಅವುಗಳ ಹಿನ್ನೆಲೆಯಲ್ಲಿ ಹೊಸ ದಿಕ್ಕೇ ಪ್ರಾರಂಭವಾಗಿದೆ, ಕನ್ನಡ ಸಿನಿಮಾದ ಗತಿಯೇ ಬದಲಾಗಿದೆ ಎಂದು ಹೇಳುವುದು ಉತ್ಪ್ರೇಕ್ಷೆಯ ಮಾತಾಗುತ್ತದೆ.

ಹಾವಳಿ ಮಾಡುತ್ತಿರುವ ಮುಖ್ಯ ವಾಹಿನಿ ಸಿನಿಮಾಗಳಿಗೆ ನೋಡಿದರೆ ಪರ್ಯಾಯ ಸಿನಿಮಾಗಳು 'ಹೊಸದೇನೋ ಹುಟ್ಟಬಹುದು' ಎನ್ನುವ ಭರವಸೆ ಹುಟ್ಟಿಸುತ್ತವೆ. ಆದರೆ, ಅವುಗಳಿಂದ ಮಹತ್ ಸಾಧನೆ ಆಗಿದೆ ಎಂದು ನನಗನ್ನಿಸುತ್ತಿಲ್ಲ. ಸಾಧ್ಯತೆಗಳು, ದಿಕ್ಕುಗಳು ಕಾಣಿಸುತ್ತಿವೆ ಎಂದು ಹೇಳುವ ಜೊತೆಗೇ ಹೊಸ ಚಲನೆಯೇ ಶುರುವಾಗಿದೆ ಎಂದು ಹೇಳುವುದು ಅತಿಶಯವಾಗುತ್ತದೆ. ಈ ಮಾತುಗಳನ್ನು ನಾನು 'ತಿಥಿ', 'ಹರಿಕಥಾ ಪ್ರಸಂಗ', 'ಒಂದು ಮೊಟ್ಟೆಯ ಕಥೆ' ರೀತಿಯ ಸಿನಿಮಾಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ. ಹೊಸ ಅಲೆಯೇ ಸೃಷ್ಟಿಯಾಗಿದೆ ಎನ್ನುವುದನ್ನು ಒಪ್ಪಿಕೊಳ್ಳಲಿಕ್ಕೆ ನಾನು ಸಿದ್ಧನಿಲ್ಲ.

ಈ ವರ್ಷ ಕನ್ನಡಕ್ಕೆ ಹತ್ತೋ ಹನ್ನೊಂದು ರಾಷ್ಟ್ರಪ್ರಶಸ್ತಿ ಬಂತೆನ್ನುವುದು ಸಂತೋಷದ ಸಂಗತಿ. ಆದರೆ, ಎರಡು ಮೂರು ವರ್ಷಗಳ ನಂತರ ಆ ಸಿನಿಮಾಗಳನ್ನು ಯಾರಾದರೂ ನೆನಪಿಸಿಕೊಳ್ಳುತ್ತಾರಾ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಈ ಹೊತ್ತಿನ ಸಿನಿಮಾಗಳು ಕನ್ನಡಕ್ಕೆ ಹೊಸ ಸಿನಿಮಾ ಜಗತ್ತನ್ನು ತೆರೆದುಕೊಟ್ಟಿವೆ ಅನ್ನಿಸುತ್ತಿಲ್ಲ. ಹಾಗೆ ನೋಡಿದರೆ, ಮಲಯಾಳಂನಲ್ಲಿ, ತಮಿಳಿನಲ್ಲಿ ಸಿನಿಮಾಗಳನ್ನು ಎಷ್ಟು ಗಟ್ಟಿಯಾಗಿ ಹೆಣೆಯುತ್ತಾರೆಂದರೆ, ಅವರ ಹುಡುಕಾಟ, ಶೋಧವನ್ನು ನೋಡಿದರೆ – ಅಂಥ ಗಟ್ಟಿಯಾದುದು ಕನ್ನಡದಲ್ಲಿ ನಡೆಯುತ್ತಿದೆಯೆಂದು ಕಾಣಿಸುತ್ತಿಲ್ಲ. ತಮಿಳು, ಮಲಯಾಳಂನ ಮೇನ್‌ಸ್ಟ್ರೀಮ್ ಸಿನಿಮಾಗಳನ್ನೂ ನೋಡಿದ್ದೇನೆ. ಅವುಗಳಿಗಿರುವ ಪಕ್ವತೆ, ಪರಿಪೂರ್ಣತೆಯನ್ನು ಸಾಧಿಸುವುದು ಕನ್ನಡ ಸಿನಿಮಾಕ್ಕಿನ್ನೂ ಆಗಿಲ್ಲ.



'ಕುರುಕ್ಷೇತ್ರ' ಅಥವಾ 'ಕೆಜಿಎಫ್' ಸಿನಿಮಾಗಳನ್ನು ನೋಡಿದರೆ ಟೆಕ್ನಿಕಲಿ ಕೂಡ ಅವು ಸ್ಪರ್ಧಾತ್ಮಕವಲ್ಲ. ಅವುಗಳು ಥಿಮ್ಯಾಟಿಕ್ ಅಲ್ಲ, ಸಿನಿಮಾ ನರೇಟಿವ್‌ನಲ್ಲಿ ಹೊಸತನವಿಲ್ಲ. ಅವುಗಳ ಸ್ಕ್ರಿಪ್ಟೇ ಗಟ್ಟಿಯಾಗಿಲ್ಲ. ಹೀಗಿದ್ದರೆ ಜನರನ್ನು ಅಟ್ರ್ಯಾಕ್ಟ್ ಮಾಡಬಹುದು, ಹೀಗಿದ್ದರೆ ಸೇಲಾಗುತ್ತೆ – ಈ ರೀತಿಯ ಲೆಕ್ಕಾಚಾರಗಳ ಹೆಣಿಗೆ ನಮ್ಮ ಕಮರ್ಷಿಯಲ್ ಸಿನಿಮಾಗಳಲ್ಲಿದೆ. ಮೋಹನ್‌ಲಾಲ್ ಅಭಿನಯದ ಮಲಯಾಳಂನ 'ಲೂಸಿಫರ್' ಸಿನಿಮಾ ನೆನಪಿಸಿಕೊಳ್ಳಿ. ಅದು ಕೂಡ ಮುಖ್ಯವಾಹಿನಿಯ ಚಿತ್ರವೇ. ಆಡುಭಾಷೆಯಲ್ಲಿ ಹೇಳುವುದಾದರೆ, ಅದು ಡಬ್ಬಾ ಸಿನಿಮಾ. ಆದರೆ ಅದರ ಸ್ಕ್ರಿಪ್ಟ್ ಗಮನಿಸಿದರೆ, ಆರಂಭದಲ್ಲಿ ಅಂತ್ಯದವರೆಗೆ ಅದಕ್ಕೊಂದು ತಾತ್ವಿಕ ಚೌಕಟ್ಟಿದೆ. ಒಂದು ಕ್ರಿಶ್ಚಿಯನ್ ಕ್ಯಾರೆಕ್ಟರ್ ಇಟ್ಟುಕೊಂಡು ಒಳಿತು–ಕೆಡುಕಿನ ಚರ್ಚೆ ನಡೆಯುತ್ತದೆ. ಬೈಬಲ್‌ನ ಅಧ್ಯಯನ ನಡೆಸಿ ಅದನ್ನು ತಾತ್ವಿಕವಾಗಿ, ಸೈದ್ಧಾಂತಿಕವಾಗಿ ಇವತ್ತಿನ ಸಂದರ್ಭಕ್ಕೆ ಹೆಣೆದಿರುವ ಪ್ರಯತ್ನ ಅದು. ಅದರ ಸಿನಿಮಾ ನರೇಟಿವ್ ಕೂಡ ತುಂಬಾ ಗಟ್ಟಿಯಾದುದು.

ಸಿನಿಮಾದ ವ್ಯಾಕರಣ, ಕಥೆ ಹೇಳುವ ರೀತಿ ಹಾಗೂ ಕಥನಕ್ರಮಗಳಲ್ಲಿ ಮಲಯಾಳಂ ಚಿತ್ರತಂಡಗಳು ಎಷ್ಟು ಸಿದ್ಧತೆ ಮಾಡಿಕೊಂಡಿರುತ್ತವೆಂದರೆ, ನಮ್ಮಲ್ಲಿ ಅಂಥ ಪ್ರಯತ್ನಗಳೇ ನಡೆಯುವುದಿಲ್ಲ. 'ಕೆಜಿಎಫ್', 'ಕುರುಕ್ಷೇತ್ರ', 'ಯಜಮಾನ' ಸ್ಲೋಗನ್ ರೀತಿಯ ಸಿನಿಮಾಗಳಿಗೆ ಗೌರವ ದೊರಕಿದಾಗ – ಪ್ರಶಸ್ತಿಗಳ ಗುಣಮಟ್ಟ ನಿರ್ಣಾಯಕರ ಗುಣಮಟ್ಟವನ್ನು ಅವಲಂಬಿಸಿದೆ ಎನ್ನುವ ಅಡೂರರ ಮಾತು ಸತ್ಯವೆನ್ನಿಸುವುದು.



ಈ ವರ್ಷ ಅತ್ಯುತ್ತಮ ನಿರ್ದೇಶನ, ಅತ್ಯುತ್ತಮ ನಟನೆ, ಅತ್ಯುತ್ತಮ ಸಂಗೀತ, ಧ್ವನಿ ವಿನ್ಯಾಸ ಹೀಗೆ ಹಲವು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಪಡೆದ ಸಿನಿಮಾ ಉರಿ. ಪಾಕಿಸ್ತಾನದ ಮೇಲೆ ನಡೆಸಿದ ಸರ್ಜಿಕಲ್ ಸ್ಟ್ರೈಕ್ ಅನ್ನೇ ವಸ್ತುವಾಗಿಟ್ಟುಕೊಂಡು ದೇಶಭಕ್ತಿಯನ್ನು ಬಂಡವಾಳವಾಗಿಸಿಕೊಂಡು ರೂಪಿತಗೊಂಡಿರುವ ಈ ಚಿತ್ರ, ಶ್ರೇಷ್ಠ ಕಲಾಕೃತಿ ಎಂದು ಒಪ್ಪಿಕೊಳ್ಳುವುದು ಸಿನಿಮಾ ಮಾಧ್ಯಮದ ಕುರಿತು ತಿಳಿವಳಿಕೆ ಇರುವವರಿಗೆ ಕಷ್ಟವೇ.

## ಕನ್ನಡಕ್ಕೆ ಬಂಪರ್ ಲಾಟರಿ

ರಾಷ್ಟ್ರಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆಯ ಬಗೆಗಿನ ತಕರಾರು ಏನಿದ್ದರೂ, ಕನ್ನಡಕ್ಕೆ ಹೆಚ್ಚು ಪ್ರಶಸ್ತಿಗಳು ದೊರೆತಿರುವುದು ಸಂತಸದ ಸಂಗತಿ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಈ ಸಡಗರಕ್ಕೆ ಸಿನಿಮಾಗಳು ಎಷ್ಟರಮಟ್ಟಿಗೆ ಕಾರಣವಾಗಿವೆಯೋ ಅಷ್ಟೇ ಕಾರಣಕರ್ತರು ಬಿ.ಎಸ್. ಲಿಂಗದೇವರು. ಆಯ್ಕೆ ಪ್ರಕ್ರಿಯೆಯಲ್ಲಿ ಕನ್ನಡವನ್ನು ಪ್ರತಿನಿಧಿಸಿದ್ದ ಅವರ ಸಮರ್ಥ ವಕಾಲತ್ತಿನಿಂದಾಗಿಯೇ ಕನ್ನಡಕ್ಕೆ ಹೆಚ್ಚು ಪ್ರಶಸ್ತಿಗಳು ದೊರೆತಿರುವುದು.

ಸಿನಿಮಾ ಎಷ್ಟೇ ಶ್ರೇಷ್ಠವಾಗಿದ್ದರೂ, ಅದರ ಪರವಾಗಿ ಪರಿಣಾಮಕಾರಿ ವಾದಮಂಡನೆ ನಡೆಯದೆ ಹೋದರೆ ಪ್ರಶಸ್ತಿಯಿಂದ ವಂಚಿತಗೊಳ್ಳುವುದಕ್ಕೆ ಅನೇಕ ಉದಾಹರಣೆಗಳಿವೆ. ಅದಕ್ಕೆ ಉದಾಹರಣೆಯಾಗಿ 'ಪರಿಯೆರಮ್ ಪೆರುಮಾಳ್' ಚಿತ್ರವನ್ನೇ ನೆನಪಿಸಿಕೊಳ್ಳಬಹುದು. ಕೆಲವೊಮ್ಮೆ ನಮ್ಮವರೇ ನಮಗೆ ತೊಡಕಾಗಿ ಪರಿಣಮಿಸುವುದೂ ಇದೆ. 'ತಾಯಿಸಾಹೇಬ' ಚಿತ್ರದ ನಿರ್ದೇಶನಕ್ಕಾಗಿ ಗಿರೀಶ ಕಾಸರವಳ್ಳಿಯವರಿಗೆ ದೊರೆಯಬೇಕಿದ್ದ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, ಕನ್ನಡದ ಅಭಿನೇತ್ರಿಯೊಬ್ಬರ ಪ್ರಬಲ ವಿರೋಧದಿಂದಾಗಿ ತಪ್ಪಿಹೋಯಿತು. 'ನಾಯಿನೆರಳು' ಚಿತ್ರವನ್ನು ಅತ್ಯುತ್ತಮ ಚಿತ್ರವಾಗಿ ಆಯ್ಕೆ ಮಾಡಲು ಇತರ ಜ್ಯೂರಿಗಳು ಒಲವು ವ್ಯಕ್ತಪಡಿಸಿದಾಗ, 'ಪ್ರತಿ ಸಲ ತಲೆ ಬೋಳಿಸುವ ಸಿನಿಮಾಗಳಿಗೆ ಪ್ರಶಸ್ತಿ ಕೊಡುವುದು ಬೇಡ' ಎಂದು ಕನ್ನಡದ ಪ್ರತಿನಿಧಿ ಪಟ್ಟು ಹಿಡಿದರಂತೆ. ಆದರೆ, ಈ ಬಾರಿ ಕನ್ನಡವನ್ನು ಪ್ರತಿನಿಧಿಸಿದ ಲಿಂಗದೇವರು ಬೇರೆಯದೇ ರೀತಿ ವಾದ ಮಾಡಿದ ಹೆಚ್ಚು ಪ್ರಶಸ್ತಿಗಳನ್ನು ಕನ್ನಡಕ್ಕೆ ತಂದಿದ್ದಾರೆ.